# ಜನಾಕಾಂಕ್ಷೆ

## ಬಿಬಿಎಂಪಿ–ಚುನಾವಣೆ 2009ಕ್ಕೆ ಬಡ ಜನತೆಯಿಂದ ಮೂಡಿಬಂದ ಪ್ರಣಾಳಿಕೆ

### ಅ. ನಗರದ ಬಡಜನರ ಅಭಿವೃದ್ಧಿಗಾಗಿ ಬೇಡಿಕೆಗಳ ಪಟ್ಟಿ

೧. ನಗರದಲ್ಲಿ ಬಡವರು ಯಾರು ಎಂದು ಸೂಕ್ತ ಮಾನದಂಡಗಳನ್ನು ಬಳಸಿ ಮೊದಲು ಗುರುತಿಸಬೇಕು. ಅನ್ಯಲಿಂಗಿಯರನ್ನೂ ಮತ್ತು ಹೆಚ್.ಐ.ವಿ. ಪೀಡಿತರನ್ನೂ ಬಡವರೆಂದು ಗುರುತಿಸಬೇಕು.

೨. ಬಿ.ಬಿ.ಎಂಪಿಯ ಎಲ್ಲ ನೀತಿಗಳೂ ಮತ್ತು ಕಾರ್ಯಕ್ರಮಗಳೂ ಬಡವರಿಗೆ ಪ್ರತ್ಯೇಕ ಅಂಶವನ್ನು ಹೊಂದಿರಬೇಕು. ಇದರಲ್ಲಿ ಬಡವರಿಗೆ ಉಚಿತ ಮೂಲ ಸೌಲಭ್ಯಗಳನ್ನು ಒದಗಿಸುವಂತಿರಬೇಕು. ಇಂತಹ ನೀತಿಗಳನ್ನು ಅನುಷ್ಠಾನಕ್ಕೆ ತರುವ ಮುನ್ನ ಸಾರ್ವಜನಿಕ ಚರ್ಚೆಯಾಗಬೇಕು. ಈ ಉಚಿತ ಸೌಲಭ್ಯಗಳನ್ನು ಗುರುತಿಸದ ಕೊಳಚೆಪ್ರದೇಶದ ನಿವಾಸಿಗಳಿಗೂ ವಿಸ್ತರಿಸಬೇಕು.

೩. ಎಲ್ಲ ಕೊಳಚೆನಿವಾಸಿಗಳಿಗೂ ಮತ್ತು ಗುರುತಿಸಿದ ವಸತಿಹೀನರಿಗೂ ಯೋಗ್ಯ ವಸತಿಯನ್ನೊದಗಿಸಬೇಕು. ಆ ಮನೆಗಳಿಗೆ ಕ್ರಯಪತ್ರಗಳನ್ನು ತಕ್ಷಣ ಒದಗಿಸಬೇಕು.. ಎಲ್ಲಾ ವಸತಿ ಯೋಜನೆಗಳಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಶೇಕಡಾ ೫೦% ರಷ್ಟು ಜಾಗ ಮೀಸಲಿರಿಸಬೇಕು.

೪. ಕೊಳಚೆಪ್ರದೇಶಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಕೂಡ ವಸತಿ ಯೋಜನೆಗಳಲ್ಲಿ ಆಶ್ರಯವನ್ನೊದಗಿಸಬೇಕು.

೫. ಕೊಳಚೆಪ್ರದೇಶಗಳನ್ನು ನೆಲಸಮ ಮಾಡುವುದು ಅಥವಾ ಅವುಗಳ ಎತ್ತಂಗಡಿ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸತಕ್ಕದ್ದು. ಪ್ರತಿಯೊಂದು ಕೊಳಚೆಪ್ರದೇಶ ಅಭಿವೃದ್ಧಿ ಯೋಜನೆಗಳಲ್ಲಿ ಮತ್ತು ಪುನರ್‌ವಸತಿ ಯೋಜನೆಗಳಲ್ಲಿ ಆ ಯೋಜನೆಯು ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ವಸತಿ ಸೌಲಭ್ಯವನ್ನು ಒದಗಿಸಿಕೊಡತಕ್ಕದ್ದು.

೬. ಕೊಳಚೆಪ್ರದೇಶಗಳು ಖಾಸಗೀ ಭೂಮಿಯಲ್ಲಿದ್ದರೂ ಕೂಡ ಅಲ್ಲಿನ ನಿವಾಸಿಗಳಿಗೆ ಅವರು ಅಲ್ಲಿ ನೆಲೆಸಿರುವ ತನಕ ಮೂಲಸೌಕರ್ಯಗಳನ್ನು ಒದಗಿಸಿಕೊಡಬೇಕು. ಇಲ್ಲಿನ ನಿವಾಸಿಗಳಿಗೆ ಮೂಲಸೌಲಭ್ಯಗಳೊಂದಿಗೆ ವಸತಿಯನ್ನು ಕಲ್ಪಿಸಿ ಅವರಿಗೆ ಕೂಡ ಭೂಮಿಯ ಹಕ್ಕನ್ನು ನೀಡಬೇಕು.

೭. ಜೆ.ಎನ್.ಎನ್.ಯು.ಆರ್.ಎಮ್.ನ ಎಲ್ಲ ಯೋಜನೆಗಳನ್ನು ಕೇಂದ್ರದ ಕಾರ್ಯಸೂಚಿಯನ್ನಾಧರಿಸಿಯೇ ಅನುಷ್ಠಾನಗೊಳಿಸಬೇಕು. ಬಹುಮಹಡಿ ವಸತಿ ಸಮುಚ್ಚಯವನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕು ಆ ಪ್ರದೇಶದ ನಿವಾಸಿಗಳಿಗೆ ಬಿಡಬೇಕು. ಜಾಗ ಉಳಿದಿದ್ದಲ್ಲಿ ಆ ಪ್ರದೇಶದ ಜನರ ಅಗತ್ಯಕ್ಕಾಗಿ ಮಾತ್ರ ಬಳಸಬೇಕು. ಬೇರೆ ಯಾವುದೇ ಕುಟುಂಬವನ್ನು ಈ ನಿಗದಿತ ಪ್ರದೇಶಗಳಿಗೆ ತರಬಾರದು. ಬಿಬಿಎಂಪಿಯು ಸಾಲದ ವರ್ತುಲಕ್ಕೆ ಸಿಲುಕದಂತೆ ತಡೆಯಲು, ಕೇಂದ್ರವು ತನ್ನ ನರ್ಮ್ ಅನುದಾನವನ್ನು ಶೇಕಡಾ 35% ರಿಂದ ಶಕಡಾ 80% ಕ್ಕೆ ಏರಿಸಲು ಒತ್ತಾಯಿಸಬೇಕು.

೮. ಯಾವುದೇ ಗುರುತಿಸಿಲ್ಲದ ಕೊಳಚೆಪ್ರದೇಶಗಳನ್ನು ಆ ಪ್ರದೇಶವು ಅಸ್ಥಿತ್ವಕ್ಕೆ ಬಂದ ೫ ವರ್ಷದ ಒಳಗೆ ಗುರುತಿಸಿ ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ರಸ್ತೆಬದಿ ವಾಸಿಸಿವವರಿಗೆ ಮತ್ತು ನಿರ್ವಸಿತರಿಗೆ ಕೂಡ ನೀರು ಮತ್ತು ಶೌಚಾಲಯದಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

೯. ಎಲ್ಲ ಬಿಎಸ್‌ಯುಪಿ ಯೋಜನೆಗಳು ಸಮಗ್ರ ಕೊಳಚೆಪ್ರದೇಶ ಅಭಿವೃದ್ಧಿ ನೀತಿಯನ್ನು ಅನುಸರಿಸಿ ಆರು ಮೂಲಭೂತ ಹಕ್ಕುಗಳಾದ ವಸತಿ, ನೀರು ಮತ್ತು ಶೌಚಾಲಯ, ಮಕ್ಕಳ ಲಾಲನೆಪಾಲನೆ ಹಾಗೂ ರಕ್ಷಣೆ, ಪ್ರಾಥಮಿಕ ಆರೋಗ್ಯ, ಪ್ರಾಥಮಿಕ ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳನ್ನೊಳಗೊಳ್ಳುವಂತೆ ಅನುಷ್ಠಾನ ಮಾಡಬೇಕು.

೧೦. ಬಿಬಿಎಂಪಿ ಆಯವ್ಯಯದಲ್ಲಿ ಬಿಎಸ್‌ಯುಪಿ ಯೋಜನೆಗಳಿಗಾಗಿ ಅನುಗುಣ ಮೊತ್ತವನ್ನು ಕಡ್ಡಾಯವಾಗಿ ಮೀಸಲಿರಿಸಬೇಕು. ಕೊಳಚೆಪ್ರದೇಶಗಳ ನವೀಕರಣ ಮತ್ತು ಮೂಲ ಸೌಲಭ್ಯಗಳ ಪೂರೈಕೆ ಬಿಬಿಎಂಪಿಯ ಪ್ರಥಮ ಆದ್ಯತೆಯ ಯೋಜನೆಯಾಗಬೇಕು. ಬಿಎಸ್‌ಯುಪಿ ಅಡಿಯಲ್ಲಿ ಮೀಸಲಿರಿಸಿದ ಹಣವನ್ನು ಸರ್ವೋಚ್ಛ ನ್ಯಾಯಾಲಯದ ಆದೇಶದನುಸಾರ ಅಂಗನವಾಡಿಗಳಿಗೆ ಹಾಗೂ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಾನದಂಡಗಳಿಗನುಸಾರವಾಗಿ ಪ್ರಾಥಮಿಕ ಶಾಲೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮುಂತಾದ ಸಾಮಾಜಿಕ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸಲು ಆದ್ಯತೆ ನೀಡಬೇಕು.

೧೧. ಬಿಎಸ್‌ಯುಪಿ ಅಡಿಯಲ್ಲಿ ಹಣವನ್ನು ಮೀಸಲಿಡುವುದಲ್ಲದೆ, ಅದನ್ನು ನಿರ್ದಿಷ್ಟ ಸಮಯದಲ್ಲಿ ವಿನಿಯೋಗಿಸುವುದು ಕೂಡ ಕಡ್ಡಾಯವಾಗಬೇಕು. ಸರಕಾರೀ ಅಧಿಕಾರಿಗಳ ಸಂಬಳವನ್ನು ಅವರ ದಕ್ಷತೆಯೊಂದಿಗೆ ಸಮೀಕರಿಸಬೇಕು ಮತ್ತು ಅವರ ಬಡತಿ ಮತ್ತು ಸಂಬಳ ಹೆಚ್ಚಳವನ್ನು ಅವರು ಬಿಎಸ್‌ಯುಪಿ, ಶೇಕಡಾ 18% ಪರಿಶಿಷ್ಟ ಜಾತಿ/ಪಂಗಡಗಳ ಯೋಜನೆ, ಶೇಕಡಾ 3% ಅಂಗವಿಕಲರ ಯೋಜನೆ ಹಾಗೂ ಇತರೆ ಯೋಜನೆಗಳ ಅನುಷ್ಠಾನ ಮತ್ತು ಅವುಗಳಿಗೆ ನಿಗದಿ ಪಡಿಸಿದ ಹಣವಿನಿಯೋಗದ ಮೇಲೆ ನಿರ್ಧರಿಸಬೇಕು. ಈ ಎಲ್ಲ ಯೋಜನೆಗಳ ಫಲಾನುಭವಿಗಳ ಆಯ್ಕೆಗೆ ಮತ್ತು ಹಣಕಾಸಿನ ವಿನಿಯೋಗಕ್ಕೆ ಸ್ಪಷ್ಠ ಕಾರ್ಯಸೂಚಿಯನ್ನು ರೂಪಿಸಬೇಕು.

೧೨.ಬಿಬಿಎಂಪಿ ಪ್ರದೇಶದಲ್ಲಿ ನಗರ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಈ ಯೋಜನೆಯಲ್ಲಿ ದೈಹಿಕ ಶ್ರಮದ ಉದ್ಯೋಗ ಮತ್ತು ಸಾಮಾಜಿಕ ಕೆಲಸ ಮಾಡಲು ಬಯಸುವ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ನೂರು ದಿನಗಳ ಖಾತರಿ ಊದ್ಯೋಗವನ್ನು ನೀಡಬೇಕು. ಪ್ರತಿ ವಾರ್ಡಿನ ಆಯವ್ಯಯ ಮುಂಗಡದಲ್ಲಿನ ಯೋಜನೆಗಳೊಂದಿಗೆ ಈ ಯೋಜನೆಯನ್ನು ಸಮೀಕರಿಸಬೇಕು. ಈ ಯೋಜನೆಯಡಿಯಲ್ಲಿ ಕೆಲಸ ಮಾಡುವ ಎಲ್ಲ ಕಾರ್ಮಿಕರಿಗೆ ಐ.ಎಲ್.ಓ ಅಡಿಯಲ್ಲಿ ಹೇಳಿರುವಂತೆ ವೇತನ ನಿಗದಿಪಡಿಸಬೇಕು.

೧೩.ನಗರದ ನಿರುದ್ಯೋಗಿ/ಅರೆಕಾಲಿಕ ನಿರುದ್ಯೋಗಿ ಬಡವರಿಗೆ ಸ್ವಯಂಉದ್ಯೋಗ ರೂಪಿಸಿಕೊಳ್ಳಲು ಅನುವಾಗುವಂತೆ ಸ್ವರ್ಣ ಜಯಂತಿ ಶಹರೀ ರೋಜಗಾರ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಎಸ್.ಜೆ.ಎಸ್.ಆರ್.ವೈ. ನೌಕರರನ್ನು ಪ್ರತಿ ವಾರ್ಡ್‌ನಲ್ಲಿ ನೇಮಿಸಬೇಕು.

೧೪.ಪ್ರತೀ ವಾರ್ಡ್‌ಗೊಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಂಪೂರ್ಣ ಮೂಲಸೌಲಭ್ಯ, ಔಷಧಿಗಳು ಮತ್ತು ಸಿಬ್ಬಂದಿಯೊಂದಿಗೆ ತೆರೆದು, ಅದು ಪ್ರತಿದಿನ ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ದೊರಕುವ ಉಚಿತ ಮತ್ತು ಹಣಪಾವತಿಸಿ ಪಡೆಯುವ ಸೌಕರ್ಯಗಳ ಮಾಹಿತಿ ಪಟ್ಟಿಯನ್ನು ಮತ್ತು ಪ್ರತಿ ಸೌಕರ್ಯಗಳ ದರಗಳ ಪಟ್ಟಿ, ಅವುಗಳು ದೊರೆಯುವ ಸಮಯಗಳನ್ನೂ ಪ್ರದರ್ಶಿಸಬೇಕು. ಪ್ರತೀ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಒಂದೊಂದು ಮೇಲ್ವಿಚಾರಣಾ ಸಮಿತಿಯನ್ನು ನೇಮಿಸಬೇಕು.

೧೫.ಬಡವರು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಹೋದಾಗ ಬಿಪಿಎಲ್ ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರವನ್ನು ಕೇಳುವ ಬದಲಾಗಿ ಆಸ್ಪತ್ರೆಗೆ ಬರುವ ಎಲ್ಲಾ ರೋಗಿಗಳಿಗೂ ಒಂದೇ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು.

೧೬.ಎಲ್ಲಾ ಶಾಲೆಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳೆರಡೂ ಇದ್ದು ಪ್ರತಿ ಶಾಲೆಗಳಲ್ಲೂ ತರಗತಿಗೊಂದರಂತೆ ಎಲ್ಲಾ ಸೌಕರ್ಯಗಳುಳ್ಳ ಕೊಠಡಿ, ಗ್ರಂಥಾಲಯ, ಕಂಪ್ಯೂಟರ್, ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ, ಅಗತ್ಯ ಸಂಖ್ಯೆಯ ಶಿಕ್ಷಕರು, ಮುಂತಾದ ಮೂಲಸೌಲಭ್ಯಗಳನ್ನು ಒದಗಿಸಬೇಕು. ಎಲ್ಲಾ ವಿಧ್ಯಾರ್ಥಿಗಳಿಗೆ ಪುಸ್ತಕಗಳನ್ನೂ, ಶಾಲಾ ಸಮವಸ್ತ್ರಗಳನ್ನು ಮತ್ತು ಅರ್ಹ ವಿಧ್ಯಾರ್ಥಿಗಳಿಗೆ ವಿಧ್ಯಾರ್ಥಿವೇತನಗಳನ್ನೂ ಕಾನೂನು ಬದ್ಧವಾಗಿ ದೊರಕುವಂತೆ ಮಾಡಬೇಕು. ವಿಧ್ಯಾರ್ಥಿ ವೇತನವನ್ನು ಕಾಲಕಾಲಕ್ಕೆ ಪರಿಷ್ಕರಿಸಿ, ಅದರಂತೆ ಹೆಚ್ಚಿಸುತ್ತಿರಬೇಕು.

೧೭.ಜನಸಂಖ್ಯೆಗನುಗುಣವಾಗಿ ಪ್ರಾಥಮಿಕ ಶಾಲೆಗಳನ್ನು ಕೊಳಚೆ ಪ್ರದೇಶದಲ್ಲಿಯೇ ತೆರೆಯಬೇಕು. ಮತ್ತು ಈ ಶಾಲೆಗಳಲ್ಲಿ ವಯಸ್ಕರ (೧೮–೩೦) ಶಿಕ್ಷಣಕ್ಕೂ ಅವಕಾಶವೊದಗಿಸಬೇಕು. ಕೊಳಚೆಪ್ರದೇಶಗಳಲ್ಲಿ ಕೂಡ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆದು ಇಲ್ಲಿನ ಮಕ್ಕಳಿಗೆ ಕೂಡ ಆಂಗ್ಲಮಾಧ್ಯಮದಲ್ಲಿ ಓದಲು ಅವಕಾಶವೊದಗಿಸಬೇಕು.

೧೮.ಎಸ್.ಡಿ.ಎಮ್.ಸಿ. ಕಾರ್ಯಕಾರಿ ಸಮಿತಿಯಲ್ಲಿ, ಸಮಾಜ ಸೇವಾ ಸಂಸ್ಥೆಗಳಿಗೆ ಪ್ರಾತಿನಿಧ್ಯ ನೀಡಿ ಅದನ್ನು ಬಲಪಡಿಸಬೇಕು. ಎಸ್.ಡಿ.ಎಮ್.ಸಿ. ಕಾರ್ಯಕಾರಿ ಸಮಿತಿಯಲ್ಲಿ ರಾಜಕೀಯ ಹಸ್ತಕ್ಷೇಪವಿರಬಾರದು. ಪ್ರತಿವಾರ್ಡ್‌ನಲ್ಲಿ ಒಂದು ವಸತಿ ಶಾಲೆಯನ್ನು ಸ್ಥಾಪಿಸಿ ನಗರದಲ್ಲಿರುವ ಉದ್ಯೋಗವನ್ನವಲಂಬಿಸಿ ಅಲೆದಾಡುವ ಕುಟುಂಬಗಳ ವಿಧ್ಯಾರ್ಥಿಗಳಿಗೆ ಹಾಗೂ ಶಾಲೆಯಿಂದ ಹೊರಗುಳಿದಿರುವ ಅಥವ ಬಾಲಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕು.

೧೯.ಉದ್ಯೋಗಸ್ಥ ಮಹಿಳೆಯರ ಚಿಕ್ಕಮಕ್ಕಳ ಪಾಲನೆಗಾಗಿ ಪ್ರತಿ ಕೊಳಚೆಪ್ರದೇಶದಲ್ಲಿ ದಿನವಿಡೀ ನಡೆಯುವ ಮಕ್ಕಳಕೇಂದ್ರ ಮತ್ತು ಅಂಗನವಾಡಿಗಳನ್ನು ತೆರೆಯಬೇಕು.

೨೦.ಬಡತನ ನಿರ್ಮೂಲನೆಯ ಎಲ್ಲಾ ಯೋಜನೆ/ಕಾರ್ಯಕ್ರಮಗಳನ್ನು ಏಕಕಿಂಡಿ ವ್ಯವಸ್ಥೆಯಡಿ ತಂದು ಫಲಾನುಭವಿಗಳು ಕಂಬದಿಂದ ಕಂಬಕ್ಕೆ ಅಲೆಯುವುದನ್ನು ತಪ್ಪಿಸಬೇಕು. ಈ ಏಕಕಿಂಡಿ ವ್ಯವಸ್ಥೆಯನ್ನು ವಾರ್ಡ್ ಮಟ್ಟದಲ್ಲಿ ತೆರೆಯಬೇಕು. ಪ್ರತಿಯೊಂದು ಯೋಜನೆಯ/ಕಾರ್ಯಕ್ರಮಗಳ ಪಟ್ಟಿಯನ್ನು ಮತ್ತು ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ವಾರ್ಡ್ ಕಚೇರಿಗಳಲ್ಲಿ ಪ್ರದರ್ಶಿಸಬೇಕು ಮತ್ತು ಇದರ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ನಡೆಸಲು ಒಬ್ಬ ಅಧಿಕಾರಿಯನ್ನು ನೇಮಿಸಬೇಕು.

೨೧.ಬಿಬಿಎಮ್‌ಪಿಯ ಎಲ್ಲಾ ಸಮಿತಿ, ಅಂಗ ಸಂಸ್ಥೆಗಳು, ಯೋಜನೆಗಳನ್ನು ಬಡವರಿಗಾಗಿ ರೂಪಿಸುವಾಗ ಕಡ್ಡಾಯವಾಗಿ ಕನಿಷ್ಠ ಒಂದು ಸೇವಾ ಸಂಸ್ಥೆಗೆ ಹಾಗೂ ಒಬ್ಬ ಸಮುದಾಯದ ಪ್ರತಿನಿಧಿಗೆ ಪ್ರಾಥಿನಿಧ್ಯ ನೀಡಬೇಕು. ಇದನ್ನು ವಾರ್ಡ್ ಹಂತದಿಂದ ಕೌನ್ಸಿಲ್ ಹಂತದವರೆ ಪಾಲಿಸಬೇಕು.

೨೨.ಬಿಬಿಎಂಪಿಯ ನಾಲ್ಕನೇ ದರ್ಜೆಯ ಗುತ್ತಿಗೆ ನೌಕರರನ್ನು ಖಾಯಂ ಮಾಡಬೇಕು ಇಲ್ಲವೇ ಗುತ್ತಿಗೆ ನೌಕರರಿಗೆ ಖಾಯಂ ನೌಕರರಿಗೆ ದೊರಕುವ ವೇತನವನ್ನು ನಿಗದಿಪಡಿಸಬೇಕು. ಈ ನೌಕರರು ಅಸುರಕ್ಷಿತ ಪರಿಸರದಲ್ಲಿ ಕೆಲಸ ಮಾಡುವುದರಿಂದ ಅವರ ಆರೋಗ್ಯದ ರಕ್ಷಣೆಯ ಹೊಣೆಯನ್ನು ಬಿಬಿಎಂಪಿಯೇ ತೆಗೆದುಕೊಳ್ಳಬೇಕು.

೨೩.ಪಡಿತರ ಚೀಟಿಯಲ್ಲಿ ಕುಟುಂಬದ ಮಕ್ಕಳನ್ನೂ ಒಳಗೊಂಡಂತೆ ಎಲ್ಲಾ ಸದಸ್ಯರ ಹೆಸರುಗಳನ್ನು ನಮೂದಿಸಿ ಪ್ರತಿ ಸದಸ್ಯರಿಗೂ ಯೂನಿಟ್ ವ್ಯವಸ್ಥೆಯಡಿ ಪಡಿತರ ವಿತರಿಸಬೇಕು. ಪಡಿತರದಲ್ಲಿ ನಿಗದಿಪಡಿಸಿರುವ ಗರಿಷ್ಠ ಮಿತಿಯನ್ನು ರದ್ದು ಪಡಿಸಬೇಕು.

೨೪.ಸಾಮಾಜಿಕ ಭದ್ರತೆಗಳಾದ ವಿವಿಧ ಪಿಂಚಣಿಗಳಿಗೆ ಸಂಬಂಧಿಸಿದಂತೆ ಆಯಾ ಪ್ರದೇಶದಲ್ಲೇ ನೆಮ್ಮದಿ ಕೇಂದ್ರಗಳನ್ನು ತೆರೆಯಬೇಕು.

೨೫.ಅಸಂಘಟಿತ ವಲಯದ ವ್ಯಾಪಾರ/ಕಾರ್ಮಿಕರು ಮಾಡುವ ಕೆಲಸಕ್ಕೆ ಸರಿಯಾದ ಬೆಲೆ ನಿಗದಿಮಾಡಬೇಕು.

**ಬ. ವಿಕೇಂದ್ರಿಕೃತ ಆಡಳಿತಕ್ಕಾಗಿ ಬೇಡಿಕೆ– ಚಾಲ್ತಿಯಲ್ಲಿರುವ ಕಾನೂನುಗಳನ್ನು ಅನುಷ್ಠಾನಗೊಳಿಸಲು ಬೇಡಿಕೆ:**

೧. 74ನೇ ಸಂವಿಧಾನದ ತಿದ್ದುಪಡಿಗನುಸಾರದಂತೆ ಬೆಂಗಳೂರಿಗೆ ಮೆಟ್ರೋಪೊಲಿಟನ್ ಯೋಜನಾ ಸಮಿತಿಯನ್ನು ಬಡವರ ಪ್ರಾತಿನಿಧ್ಯದೊಂದಿಗೆ ರೂಪಿಸಬೇಕು. ಜೆ.ಎನ್.ಎನ್.ಯು.ಆರ್.ಎಮ್. ಪ್ರಸ್ತಾವಿಸಿರುವ ಕಡ್ಡಾಯ ಸುಧಾರಣೆಗಳನ್ನು ವ್ಯಾಪಕ ಹಾಗೂ ಎಲ್ಲರನ್ನೂ ಒಳಗೊಂಡ ಸಂವಾದಗಳ ನಂತರ ಅನುಷ್ಠಾನಗೊಳಿಸತಕ್ಕದ್ದು.

೨. ವಾರ್ಡ್ ಸಮಿತಿಗಳನ್ನು ಸಮಯಕ್ಕೆ ಸರಿಯಾಗಿ ರಚಿಸಿ ಅವುಗಳಿಗೆ ಅಗತ್ಯವಾದ ಮೂಲಸೌಕರ್ಯ, ಸಿಬ್ಬಂದಿ ಮತ್ತು ಅನುದಾನವನ್ನು ನೀಡಿ ಸುಸೂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು.

೩. ನಿಗದಿತ ದಿನದಂದು ಪ್ರತಿ ತಿಂಗಳೂ ವಾರ್ಡ್ ಸಮಿತಿಯು ವಾರ್ಡ್ ವ್ಯಾಪ್ತಿಯಲ್ಲಿ ಸಭೆಯನ್ನು ಕರೆಯಬೇಕು. ಸಭೆ ಸೇರುವ ದಿನಾಂಕ, ಸಮಯ ಮತ್ತು ಸ್ಥಳಗಳನ್ನು ಮಾಧ್ಯಮದ ಮೂಲಕ ಪ್ರಚುರ ಪಡಿಸಬೇಕು ಹಾಗೂ ಸಭೆಯ ನಡಾವಳಿಯನ್ನು ಸಾರ್ವಜನಿಕರಿಗೆ ಈ ಮೂಲಕ ತಲುಪಿಸಬೇಕು. ಸಾರ್ವಜನಿಕರು ವಾರ್ಡ್ ಸಮಿತಿಗಳ ನಡಾವಳಿಯನ್ನು ವೀಕ್ಷಿಸಲು ಅನುಕೂಲ ಮಾಡಿಕೊಡುವುದು.

೪. ವಾರ್ಡ್‌ನ ಮಾಹಿತಿ, ಸಭೆಗಳ ನಡಾವಳಿಗಳು, ವಾರ್ಡ ಆಯವ್ಯಯ ಮುಂಗಡ ಪತ್ರ, ಯೋಜನೆಗಳ ವಿವಿಧ ಹಂತಗಳು, ದಿನದಿನದ ಖರ್ಚು–ವೆಚ್ಚದ ಲೆಕ್ಕದ ಪತ್ರಗಳು ಮತ್ತು ರಸೀತಿಗಳು, ಮುಂತಾದವುಗಳನ್ನು ವಾರ್ಡ್ ಕಚೇರಿಯಲ್ಲಿ ಪ್ರದರ್ಶಿಸತಕ್ಕದ್ದು ಅಥವಾ ಸಾರ್ವಜನಿಕರು ಬೇಡಿದಾಗ ಅವರಿಗೆ ದೊರಕುವ ವ್ಯವಸ್ಥೆಯನ್ನು ರೂಪಿಸತಕ್ಕದ್ದು.

**ಹೊಸ ಕಾನೂನುಗಳಡಿಯಲ್ಲಿ ಬಯಸುವ ಬದಲಾವಣೆಗಳು**

೫. ಮೂರು ಹಂತಗಳ ಮುನಿಸಿಪಲ್ ಕಾರ್ಪೋರೇಶನ್ ನಿರ್ಮಾಣ (ಪಂಚಾಯತಿ ರಾಜ್ ಆಡಳಿತ ಮಾದರಿ).
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಿಲ್ಲಾ ಪಂಚಾಯಿತಿಯು ಕಾರ್ಯನಿರ್ವಹಿಸುವ ರೀತಿಯಲ್ಲಿ
- ವಲಯ ಸಮಿತಿ ತಾಲ್ಲೂಕು ಪಂಚಾಯಿತಿಯು ನಿರ್ವಹಿಸುವ ರೀತಿಯಲ್ಲಿ
- ವಾರ್ಡ್ ಸಮಿತಿ ಗ್ರಾಮ ಪಂಚಾಯಿತಿಯು ಕಾರ್ಯನಿರ್ವಹಿಸುವ ರೀತಿಯಲ್ಲಿ ರಚನೆಯಾಗಬೇಕು.

೬. ಪ್ರತಿ ವಾರ್ಡ್‌ಗೆ ಒಂದು ವಾರ್ಡ್ ಸಮಿತಿಯನ್ನು ರಚಿಸಬೇಕು. ಈ ಸಮಿತಿಯಲ್ಲಿ ಕೌನ್ಸಿಲರ್ ಮುಖ್ಯಸ್ಥರಾಗಿರಬೇಕು. ಪ್ರತಿ ವಾರ್ಡ ಸಮಿತಿ ಸದಸ್ಯರನ್ನು ನೇರ ಚುನಾವಣೆಯ ಮೂಲಕ ಆರಿಸತಕ್ಕದ್ದು. ಈ ಚುನಾವಣೆಯು ಕೌನ್ಸಿಲರ್ ಚುನಾವಣೆಯೊಂದಿಗೆ ಮುಂದಿನ ಚುನಾವಣೆಯಲ್ಲೆ ನಡೆಸಲು ಕಾನೂನು ರೂಪಿಸಬೇಕು. ಪ್ರತಿ ವಾರ್ಡ್ ಸಮಿತಿಯ ಸದಸ್ಯ 2000-5000 ಜನಸಂಖ್ಯೆಯನ್ನು ಪ್ರತಿನಿಧಿಸುವಂತಿರಬೇಕು. (ಅಥವಾ ಒಂದು ಇಲ್ಲವೇ ಹಲವು ಚುನಾವಣಾ ಮತದಾನ ಕ್ಷೇತ್ರಗಳಿಂದ)

೭. ವಾರ್ಡ್ ಮತ್ತು ವಲಯ ಸಮಿತಿಗಳಲ್ಲಿ ಮೂರನೇ ಒಂದು ಭಾಗದ ಪ್ರಾತಿನಿಧ್ಯವನ್ನು ಮಹಿಳೆಯರಿಗೆ ಮೀಸಲಿರಿಸಬೇಕು ಮತ್ತು ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ/ಪಂಗಡ, ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿರಿಸಬೇಕು.

೮. ನಗರಪಾಲಿಕೆಗಳ ಕರ್ತವ್ಯಗಳ ಪಟ್ಟಿಯನ್ನು ರಾಜ್ಯಮಟ್ಟದ ಶಾಸನಗಳ ಮೂಲಕ (ಶೆಡ್ಯೂಲ್ 12 ನ್ನು ಮೀರಿ) ಪಡಿತರ, ಕಾರ್ಮಿಕ ಮತ್ತು ಔದ್ಯೋಗಿಕ ವಿಷಯಗಳು, ಸಾಮಾಜಿಕ ಭದ್ರತೆ, ಪ್ರಾಥಮಿಕ ಆರೋಗ್ಯ ಮತ್ತು ಪ್ರಾಥಮಿಕ ಶಿಕ್ಷಣ ಮುಂತಾದ ಮೂಲಸೌಲಭ್ಯ ವಿಷಯಗಳನ್ನು ಒಳಗೊಳ್ಳುವಂತೆ ಹಿಗ್ಗಿಸಬೇಕು

೯. ವಾರ್ಡ್ ಮಟ್ಟದಲ್ಲಿ ಎಲ್ಲ ಯೋಜನೆಗಳನ್ನು ರೂಪಿಸುವಾಗ, ಅವುಗಳ ಆದ್ಯತೆಗಳನ್ನು ನಿರ್ಧರಿಸುವಾಗ ಮತ್ತು ಅನುದಾನವನ್ನು ವೆಚ್ಚಮಾಡುವಾಗ ಸಾರ್ವಜನಿಕರ ಹಾಗೂ ಬಡವರ ಭಾಗವಹಿಸುವಿಕೆಯನ್ನು ನಿಶ್ಚಿತಗೊಳಿಸಿಕೊಳ್ಳಬೇಕು.

೧೦. ಸಮಗ್ರ ನಗರಾಭಿವೃದ್ಧಿ ಯೋಜನೆಯನ್ನು (ಸಿಡಿಪಿ) ಸಾರ್ವಜನಿಕ ಭಾಗವಹಿಸುವಿಕೆಯೊಂದಿಗೆ ವಾರ್ಡ್ ಮಟ್ಟದಲ್ಲಿ ಮತ್ತು ಸಬ್ ವಾರ್ಡ ಮಟ್ಟದಲ್ಲೆ ಸಮಾಲೋಚಿಸಿ ರೂಪಿಸತಕ್ಕದ್ದು. ನಗರ ಮಟ್ಟದ ಸಮಾಲೋಚನೆಗಳಲ್ಲಿ ಸೇವಾಸಂಸ್ಥೆಗಳ ಮತ್ತು ಇನ್ನಿತರ ನಾಗರಿಕ ಸಂಸ್ಥೆಗಳ ಸದಸ್ಯರ ಸಲಹೆಗಳನ್ನು ಪಡೆಯುವುದು. ಬಿಬಿಎಂಪಿಯ ಪುರಸಭೆ ಸಮಗ್ರ ನಗರ ಯೋಜನೆಯ ತಯಾರಿ ಮತ್ತು ಅನುಷ್ಠಾನದ ಪ್ರತಿಹಂತದಲ್ಲೂ ಪಾಲ್ಗೊಳ್ಳುವುದು. ಎಲ್ಲ ನಗರ ಹಾಗೂ ವಾರ್ಡ್ ಮಟ್ಟದ ಯೋಜನೆಗಳನ್ನು ಮೆಟ್ರೋಪಾಲಿಟನ್ ಯೋಜನಾ ಸಮಿತಿ 74ನೇ ಸಂವಿಧಾನಾತ್ಮಕ ತಿದ್ದುಪಡಿಯಡಿ ಕ್ರೋಢೀಕರಿಸಬೇಕು.

೧೧. ಪ್ರತಿ ವಾರ್ಡ್‌ನ ಕಾರ್ಯಯೋಜನೆಗಳ (ಪ್ರತಿ ಇಲಾಖೆಯ) ಆಯವ್ಯಯ ಮುಂಗಡ, ಕೆಲಸದ ಗುತ್ತಿಗೆ ಪಡೆದವರ ಮಾಹಿತಿ, ಕೆಲಸಗಳ ಪ್ರಗತಿಯ ಮಾಹಿತಿ, ಈ ಕೆಲಸಗಳ ಮೇಲ್ವಿಚಾರಣಾ ಅಧಿಕಾರಿಯ ಹೆಸರು, ಇತ್ಯಾದಿ ಇವುಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸತಕ್ಕದ್ದು. ಮತ್ತು ಇದನ್ನು ಮೂರು ತಿಂಗಳಿಗೊಮ್ಮೆ ನವೀಕರಿಸುವುದು. ಬಿಬಿಎಮ್‌ಪಿಯ ಪ್ರತಿ ಇಲಾಖೆ ಮಾಹಿತಿ ಹಕ್ಕು ಕಾಯ್ದೆಯಡಿ ಸ್ವಯಂ ಘೋಷಿತವಾಗಿ ನೀಡಬೇಕಾದ ಮಾಹಿತಿಯನ್ನು ಪ್ರತಿವರ್ಷ ಪ್ರಕಟಿಸುವುದು.

೧೨. ಪ್ರತಿ ವಾರ್ಡ್ ಸಮಿತಿಯಲ್ಲಿ ನಿರ್ದಿಷ್ಟ ವಿಷಯಗಳ ಮೇಲ್ವಿಚಾರಣೆಗಾಗಿ ಜನರ ಭಾಗವಹಿಸುವಿಕೆಯುಳ್ಳ ಉಪಸಮಿತಿಗಳನ್ನು ರೂಪಿಸತಕ್ಕದ್ದು. ಉದಾಹರಣೆಗೆ:

* ಪಡಿತರ
* ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ
* ರಸ್ತೆ ಮತ್ತು ಚರಂಡಿ
* ಬಡತನ ನಿರ್ಮೂಲನೆ
* ಸಾಮಾಜಿಕ ಭದ್ರತೆ, ಇತ್ಯಾದಿ.

೧೩.ವಾರ್ಡ್ ಸಮಿತಿಗಳಲ್ಲಿ ಮತ್ತು ಉಪಸಮಿತಿಗಳಲ್ಲಿ ಸ್ತ್ರೀಸಂಘಟನೆಗಳು, ಯುವಕ ಸಂಘಟನೆಗಳು, ಕೊಳಚೆ ಪ್ರದೇಶ ನಿವಾಸಿಗಳ ಸಂಘಗಳು, ವರ್ತಕರ ಸಂಘಟನೆಗಳು, ಸೇವಾ ಸಂಸ್ಥೆಗಳಗೆ ಪ್ರಾಥಿನಿಧಿಕ ಸದಸ್ಯತ್ವವನ್ನು ಮೀಸಲಿರಿಸಬೇಕು. ಇವರೊಂದಿಗೆ ಮಕ್ಕಳಗೆ ಮತ್ತು ಅನ್ಯಲಿಂಗಿಯರಿಗೆ ಮತ್ತು ಹೆಚ್ಐವಿ ಸೋಂಕು ಪೀಡಿತರಿಗೆ ಕೂಡ ಈ ಸಮಿತಿಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಬೇಕು.

೧೪.ಬಿಬಿಎಂಪಿ ಬಿ.ಡಬ್ಲಿಯೂ.ಎಸ್.ಎಸ್.ಬಿ. ಬೆಸ್ಕಾಂ, ಕೆ.ಎಸ್.ಸಿ.ಬಿ, ಪೋಲೀಸ್, ಸಾರಿಗೆ ಸಂಸ್ಥೆ ಇತ್ಯಾದಿ ಸೇವಾಸಂಸ್ಥೆಗಳ ಅಧಿಕಾರಿಗಳು ವಾರ್ಡ್ ಸಮಿತಿಯ ಪದನಿಮಿತ್ತ ಸದಸ್ಯರನ್ನಾಗಿ ನೇಮಿಸುವುದು. ಇವರು ವಾರ್ಡ್ ಸಮಿತಿಗೆ ಜವಾಬ್ದಾರರಾಗಿರಬೇಕು. ಇವರೆಲ್ಲರ ಕಾರ್ಯವ್ಯಾಪ್ತಿಯು ವಾರ್ಡ್ವಲಯವಾಗಿರಬೇಕು.

೧೫.ಎಲ್ಲಾ ಅರೆಸರ್ಕಾರೀ  ಸಂಸ್ಥೆಗಳು ನಗರಪಾಲಿಕೆಗೆ ಬದ್ಧರಾಗಿರಬೇಕು.

೧೬. ಎಲ್ಲಾ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕು ಬಿಬಿಎಮ್ಪಿ ಕೌನ್ಸಿಲ್ಗೆ ಇರಬೇಕು. ಇದಕ್ಕೆ ಪರ್ಯಾಯವಾಗಿ ಸಂವಿಧಾನ ಬಾಹಿರ ಯಾವ ಸಂಸ್ಥೆಗಳೂ ಇರಬಾರದು.

೧೭.ಯಾವುದೇ ನಿರ್ಭಂದಗಳಿಲ್ಲದೇ ಬಿಬಿಯಂಪಿಯ ಆಯವ್ಯಯ ಮುಂಗಡದಲ್ಲಿ ಶೇಕಡಾ 40% ರಷ್ಟು ಹಣವನ್ನು ವಾರ್ಡ್ಸಮಿತಿಗಳಗೆ ವರ್ಗಾಯಿಸಿ ಜನರು ಆಶಿಸುವ ಯೋಜನೆಗಳನ್ನು ರೂಪಿಸಲು ಅನುವುಮಾಡಿಕೊಡಬೇಕು. (ಗ್ರಾಮ ಪಂಚಾಯಿತಿ ಮಾದರಿ).

೧೮.ವರ್ಷದಲ್ಲಿ ಕನಿಷ್ಠ ನಾಲ್ಕು ವಾರ್ಡ್ ಅಥವಾ ಉಪವಾರ್ಡ್ ಸಭೆಗಳನ್ನು ಗ್ರಾಮಸಭೆಗಳ ಮಾದರಿಯಲ್ಲಿ ಆಯೋಜಿಸುವುದು. ಇವುಗಳನ್ನು ಯೋಜನೆಗಳನ್ನು ರೂಪಿಸಲು, ಅನುಷ್ಠಾನಗೊಳಿಸಲು ಮೇಲ್ವಿಚಾರಣೆ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಲು ಉಪಯೋಗಿಸತಕ್ಕದ್ದು. ವಾರ್ಡ್ ಸಮಿತಿಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸದ ಪಕ್ಷದಲ್ಲಿ ಸಂಬಂಧಿತ ವ್ಯಕಿಯನ್ನು ಹೊಣೆಯಾಗಿಸಿ ದಂಡವನ್ನು ವಿಧಿಸತಕ್ಕದ್ದು.

೧೯.ಪ್ರತಿಯೊಂದು ಕೊಳಚೆಪ್ರದೇಶದಲ್ಲಿಯೂ ಒಂದೊಂದು ಸಹಾಯ ಕೇಂದ್ರವನ್ನು ವಾರ್ಡ್ ವತಿಯಿಂದಲೇ ತೆರೆದು ಅಲ್ಲಿನ ಜನತೆಯ ಕುಂದುಕೊರತೆಗಳಗೆ ಸ್ಪಂದಿಸಬೇಕು.

೨೦.ಗೆದ್ದ ಪ್ರತಿನಿಧಿಗಳು ತಿಂಗಳು/ವಾರಕ್ಕೊಮ್ಮೆಯಾದರೂ ಸಾರ್ವಜನಿಕರನ್ನು ಭೇಟಿಮಾಡಿ ಅವರ ಕುಂದುಕೊರತೆಗಳನ್ನು ನಿವಾರಿಸಬೇಕು. ಈ ಪ್ರತಿನಿಧಿಗಳು ಜನರಿಗೆ ಯಾವಾಗಲೂ ಜನರ ಭೇಟಿಗೆ ಲಭ್ಯವಿರಬೇಕು.

೨೧.ನಗರಪಾಲಿಕೆ ಆಡಳಿತದಲ್ಲಿ ಎಮ್ಎಲ್ಎ ಅಥವಾ ಎಂಪಿಗಳ ಹಸ್ತಕ್ಷೇಪವಿರಬಾರದು. ಕೆಳಹಂತದಲ್ಲಿ ಮಾಡಲು ಸಾಧ್ಯವಾಗುವ ಕೆಲಸಗಳನ್ನು ಆ ಹಂತದಲ್ಲೇ ಮಾಡಬೇಕು.

೨೨.ವಾರ್ಡ್ನ ಸಂಪನ್ಮೂಲಗಳ ಬಳಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಾಗ ವಾರ್ಡ್ ಸಮಿತಿಯ ಅನಿಸಿಕೆಗೆ ಮತ್ತು ಒಪ್ಪಿಗೆಗೆ ಪ್ರಾಮುಖ್ಯತೆ ಇರಬೇಕು.

೨೩.ಪ್ರತಿಯೊಬ್ಬ ನಾಗರೀಕನನ್ನೂ ಅವನು ಪಡಿತರ ಚೀಟಿ ಹೊಂದಿಲ್ಲದಿದ್ದರೂ, ಹಾಗೂ ಅನಧಿಕೃತ ಕೊಳಚೆ ಪ್ರದೇಶ ನಿವಾಸಿಗಳನ್ನೂ, ನಿರ್ವಸಿತರನ್ನೂ, ಮತ್ತು ರಸ್ತೆ ಬದಿ ನಿವಾಸಿಗಳನ್ನು ಕೂಡ ಮತದಾರರ ಪಟ್ಟಿಯಲ್ಲಿ ಸೇರಿಸತಕ್ಕದ್ದು.

೨೪.ನರ್ಮ್ ಯೋಜನೆ ಅನುದಾನದ ಶೇಕಡಾ 5% ರಷ್ಟು ಹಣವನ್ನು ಮುನಿಸಿಪಾಲಿಟಿ ಚುನಾಯಿತ ಪ್ರತಿನಿಧಿಗಳು, ಮತ್ತು ನಾಗರೀಕರಲ್ಲಿ 74ನೇ ಸಂವಿಧಾನ ತಿದ್ದುಪಡಿಯ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರಗಳನ್ನು ನಡೆಸಲು ಬಳಸತಕ್ಕದ್ದು.